ಪ್ರಯೋಜನವಾಗಿಲ್ಲ. ಬರೆ ಇಂಜಿನೀಯರ್ಸ್‌ಗಳು ಮಾತ್ರವಲ್ಲ, ಬಡಜನತೆಯು ಇರುತ್ತಾರೆಂದು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.-- ಈಗಾಗಲೇ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹೇಳಿದ್ದಾರೆ ಅವರೂ ಸಹ ನನ್ನು ಹತ್ತಿರ ಎರಡುನೂರುಸಲ ಬಂದಿದ್ದರು. ನಾವು ಭೀಮರಾಯನ ಗುಡಿಗೆ ಹೋಗಿದ್ದಾಗ ನನ್ನನ್ನು ಭೇಟಿಯಾಗಿದ್ದರು. ನನಗೆ ಸ್ವಲ್ಪ ಅವಕಾಶವನ್ನು ಕೊಡಿ ಎಂದು ಹೇಳಿದ್ದೇವೆ. ನಿಮ್ಮ ಮೇಲೆ ಸಂಪೂರ್ಣವಾಗಿ ಸಹಾನುಭೂತಿ ಇದೆ ಎಂದೂ ಕೂಡ ಹೇಳಿರುತ್ತೇವೆ. ಕೇವಲ ಸತ್ಯಾಗ್ರಹವನ್ನು ಮಾಡಿ ಸರ್ಕಾರದ ಗಮನ ಸೆಳೆಯುತ್ತೇವೆಂದು ಹೇಳಿದರೆ ನನಗನಿಸುತ್ತದೆ ಅದು ಸಹಾನುಭೂತಿಯನ್ನು ಕೆಡಿಸಿದಂತಾಗುತ್ತದೆ ಯಾವ ಸರ್ಕಾರ ಸಹಾನುಭೂತಿಯನ್ನು ಹೊಂದಿರುತ್ತದೋ ಆ ಸರ್ಕಾರದಮೇಲೆ ಈ ರೀತಿಯಾಗಿ ಪ್ರಭಾವ ತರುತ್ತೇನೆಂದು ಹೇಳತಕ್ಕಂಥದ್ದು ಸಹಾನುಭೂತಿಯಾಗಲಾರದು. ಆದ್ದರಿಂದ ಅವರು ಏನು ಸತ್ಯಾಗ್ರಹ ಮಾಡುತ್ತಿರುತ್ತಾರೋ ಅದನ್ನು ವಾಪಸ್ ತೆಗೆದುಕೊಂಡರೆ ಸರ್ಕಾರ ಸಂಪೂರ್ಣವಾಗಿ ಸಹಾನುಭೂತಿಯನ್ನು ತೋರಿಸುತ್ತದೆ. ಅವರ ಸ್ಕೇಲ್ ಹೆಚ್ಚು ಮಾಡಬೇಕೆಂದು ಇದೆ. ಇಷ್ಟು ಅಷ್ಟೇ ಅಲ್ಲ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಲ್ಲಿಯೂ ನ್ಯೂನತೆಗಳು ಇದೆ. ಇದೆಲ್ಲವನ್ನೂ ಪರಿಶೀಲನೆ ಮಾಡಲು ಸರ್ಕಾರದ ಸಮಿತಿಯು ಇದೆ ಆ ಸಮಿತಿಯ ತೀರ್ಮಾನದಂತೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಯೇ ಹೊರತು ಇದ್ದಕ್ಕಿದ್ದಹಾಗೆ ದಿಢೀರನೆ ಕ್ರಮ ತೆಗೆದುಕೊಳ್ಳಬೇಕೆಂದರೆ ಅದು ಹಾಗೆ ಆಗಲಿಕ್ಕೆ ಇಲ್ಲ.

(vi) ಕರ್ನಾಟಕ ಪ್ರದೇಶ ಕಾಂಗ್ರೇಸ್ ಸಮಿತಿ (ಹುಬ್ಬಳ್ಳಿ) ಯ ಕಟ್ಟಡದ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯಿಲಿ (ವಿರೋಧ ಪಕ್ಷದ ನಾಯಕರು) --ಸನ್ಮಾನ್ಯ ಅಧ್ಯಕ್ಷರೇ, ಈವತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಇದಕ್ಕೆ ಸಂಬಂಧಪಟ್ಟಂತೆ ಸಿ ಟಿ ಎಸ್. ನಂ. 4626 ಇದು ಮುನಿಸೀಪಾಲ್ ಪ್ರಾಪರ್ಟಿಯಾಗಿತ್ತು. ಇದನ್ನು ಕರ್ನಾಟಕ ಪ್ರಾವಿಯನ್‌ಷಿಯಲ್ ಕಾಂಗ್ರೇಸ್ ಕಮಿಟಿ 1949 ರಲ್ಲಿ 11,700 ರೂಪಾಯಿಗಳಿಗೆ ಮುನಿಸೀಪಾಲ್ ನಂಬರ್ ಎಂ ಯು. ಎನ್ 2949ರ ಪ್ರಕಾರ ಖರೀದಿ ಮಾಡಿದಾರೆ ಅಮೇಲೆ ಇದರ ಬಗ್ಗೆ ಕೇಲ್‌ಡ್ರೀಡ್ ಕೂಡ ಆಗಿದ್ದು ಇದೆ. ಈ ಪ್ರಾಪರ್ಟಿಗೆ ಕೆ. ಪಿ. ಸಿ ಸಿ. ಹೆಸರಿನಲ್ಲಿ ಇದ್ದುದನ್ನು 3-3-82ರಂದು ಡಿಸ್ಟ್ರಿಕ್ಟ್ ಜನತಾ ಪಾರ್ಟಿ. ಹುಬ್ಬಳ್ಳಿ ಅವರು ಒಂದು ಸಿಟಿ ಸರ್ವೆ ಆಫೀಸಿಗೆ ಅರ್ಜಿಯನ್ನು ಕೊಟ್ಟು ತನ್ನ ಹೆಸರಿಗೆ ದಾಖಲೆ ಮಾಡಿಕೊಂಡರು, ಇದಾದ ನಂತರ ಕೆ. ಪಿ. ಸಿ. ಸಿ. ಯವರು ಮತ್ತು ಡಿ. ಸಿ. ಸಿ. ಯವರು ಸಿಟಿ ಸರ್ವೆ ಆಫೀಸಿಗೆ ಇದು ಈ ರೀತಿ ಯಾದುದು ತಪ್ಪು ಎಂದು ನೋಟಿಸ್ ಕೊಟ್ಟ ಮೇಲೆ **The position prevailed prior to 3-2-82 shall be continued by reviewing entry, dated 7-2-30 and 10-4-57 in pursuance of the regd. sale deeds purchsing the title of the property from the municipality".** ಎಂದು ಹೇಳಿ ಹುಕ್ಕುಂ ಆಯಿತು. ಹೀಗಿದ್ದರೂ ಮೊನ್ನೆ 13-2-1984 ರಂದು ಕರ್ನಾಟಕ ಜನತಾ ಪಾರ್ಟಿಯ ಆಫೀಸಿನವರು ಮತ್ತು ಡಿಸ್ಟ್ರಿಕ್ಟ್ ಜನತಾ ಪಾರ್ಟಿ. ಹುಬ್ಬಳ್ಳಿಯವರು ದಿನಾಂಕ 13-2-1984 ರಂದು ಸಿಟಿ ಸರ್ವೆ ಆಫೀಸಿಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಅವರು ಕೆ. ಪಿ. ಸಿ. ಸಿ. ಗೇ ಆಗಲಿ ಅಥವಾ ಡಿ. ಸಿ. ಸಿ. ಗೇ ಆಗಲಿ ಯಾವುದೇ ಆಫೀಸಿಗೆ ನೋಟೀಸ್ ಕೊಡದೆ ಪುನಃ ಅದನ್ನು ಬದಲು ಮಾಡಿರುತ್ತಾರೆ. ಈ ರೀತಿಯಾಗಿ ಬದಲು ಮಾಡಿದ ಕ್ರಮವನ್ನು ನೋಡಿದರೆ.....

Mr. Speaker —Why should we go into the details. It is a matter for the Court to decide.

Sri M. Veerappa Moily.--I would not have raised but for the importance. I will state it briefly. ಇದು ಏನು ಮಾಡಿದರು ಅಂದರೆ ಸಿಟಿ ಸರ್ವೆ ಆಫೀಸ್‌ನಲ್ಲಿ ಸರ್ವೆಯರು **He should have made the entries in Ink. It is to be attested by the Assistant Director, City Survey Office.** ಇದಾದ ಮೇಲೆ ದಿನಾಂಕ 13-14 ರಂದು ಬಲಾತ್ಕಾರವಾಗಿ ಪ್ರವೇಶ ಮಾಡಲು ಪ್ರಯತ್ನ ಪಾಡಿದರು. ನನಗೆ ವರ್ತಮಾನ ತಿಳಿದ ಪ್ರಕಾರ ನಾನು ಅದನ್ನು ಸೂಕ್ಷ್ಮವಾಗಿ ಹೇಳುತ್ತೇನೆ ಸನ್ಮಾನ್ಯ ಮಂತ್ರಿಗಳಾದ ನಜೀರ್‌ಸಾಹೇಬ್‌ರವರು ಕೂಡ **If it is not he, the can deny it. He become a**

party to trespass. I have a report. They are the party in power ಇದು ಏನಾಗಿದೆ ಎಂದರೆ ಪಾರ್ಟಿ ನಾವು ಅಧಿಕಾರದಲ್ಲಿ ಇದ್ದೇವೆಂದು ಹೇಳುವುದಾದರೆ ಎಚ್ಚರಿಕೆಯನ್ನು ವಹಿಸಬೇಕಾಗಿತ್ತು. "ಬೇಲಿಯೇ ಹೊಲವನ್ನು ಮೇಯ್ದರೆ...ಏನಾಗುತ್ತದೆ ? ಹೀಗಾದರೆ ಸಾಮಾನ್ಯ ಪ್ರಜೆಗಳಿಗೆ ಕಾನೂನಿನ ರಕ್ಷಣೆ ಹೇಗೆ ದೊರಕಲಿಕ್ಕೆ ಸಾಧ್ಯವಾಗುತ್ತದೆ ? ದಯವಿಟ್ಟು ನೋಡಿ 13-2-84 ರಂದೇ ಮಾಡಿದಂಥ ಒಂದು ಹೈಕೋರ್ಟ್ ಹುಕ್ಕುಂ ಇದೆ, ಎಂದು ಈ ಪ್ರಕಾರವಾಗಿ ಪ್ರವೇಶ ಮಾಡ ತಕ್ಕಂಥದ್ದು ಇದ್ದರೆ, ನಮ್ಮ ಹಕ್ಕು ಬರತಕ್ಕಂಥದ್ದು ಇದೆ ಎಂದು ಕ್ರಿಮಿನಲ್ ರಿವಿಷನಲ್ ಪಿಟೀಷನ್ ನಂ. 544:72ರ ಪ್ರಕಾರ ನೇರವಾಗಿ ಸೇಲ್ ಡೀಡ್ ಪ್ರಕಾರ ಜಮೀನು ಎಲ್ಲ ಬರತಕ್ಕಂಥದ್ದು ಇರುತ್ತದೆ. ಅವರು ಅಧಿಕಾರಕ್ಕೆ ಬಂದಿರುತ್ತೇವೆಂದು ಅಧಿಕಾರವನ್ನು ದುರುಪಯೋಗಮಾಡಿಕೊಂಡು ಅತಿಕ್ರಮ ಪ್ರವೇಶಮಾಡಿ ಜಿಲ್ಲಾಧಿಕಾರಿಗಳು ಪೋಲೀಸ್ ಅಧಿಕಾರಿಗಳು, ಎಲ್ಲ ಅಧಿಕಾರಿಗಳು ನಮ್ಮ ಕಡೆ ಇದ್ದಾರೆಂದು ನಮ್ಮ ಪಕ್ಷದ ಆಸ್ತಿಯನ್ನು ಕಬಳಿಸತಕ್ಕಂಥ ಪ್ರಯತ್ನ ನಡೆದರೆ ಸಾಮಾನ್ಯ ಪ್ರಜೆಗಳಿಗೆ ರಕ್ಷಣೆ ಹೇಗೆ ಆಗುತ್ತದೆಂದು ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಇದು ಒಂದು ಗಂಭೀರವಾದಂಥ ಪರಿಸ್ಥಿತಿಯಾಗಿದೆ. ಅವರಿಗೆ ಅಧಿಕಾರವಿದ್ದರೆ ಕೋರ್ಟಿನಲ್ಲಿ ಹೇಳತಕ್ಕಂಥದ್ದು ಇರುತ್ತದೆ.

Mr. Speaker.-- Let us not go to the details.

Sri M. Veerappa Moily.-- If they want to take law into their hands we will also repeat.

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಯವರು).-- ಅಧ್ಯಕ್ಷರೇ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಪ್ರಾರಂಭದಲ್ಲಿಯೇ ಇದು ನಿಯಮ 334ರ ಪ್ರಕಾರ ಇಲ್ಲಿ ಎತ್ತತಕ್ಕಂಥ ವಿಚಾರವಲ್ಲ ಇದು ಒಂದು ಲೀಗಲ್ ಡೆಸ್ಪ್ಯೂಟ್ ಆಗಿದೆ ಈ ಒಂದು ಪ್ರಾಪರ್ಟಿ ಕಾಂಗ್ರೆಸ್ (ಐ) ಪ್ರಾಪರ್ಟಿಯಾಗಿತ್ತು. ಅದು ಹೋದಮೇಲೆ ಕಾಂಗ್ರೆಸ್ ಜನತಾ ಪಾರ್ಟಿಯಲ್ಲಿ ಮರ್ಜ್ ಆದಮೇಲೆ ಜನತಾ ಪಾರ್ಟಿಯ ಹೆಸರಿನಲ್ಲಿ ಆ ಒಂದು ಪ್ರಾಪರ್ಟಿ ಮುನಸೀಪಲ್ ರೆಕಾರ್ಡ್‌ನಲ್ಲಿ ಬದಲಾವಣೆ ಆಯಿತು. ಈಗ ಇಷ್ಟು ವರ್ಷಗಳಾದಮೇಲೆ ನಾವು ಅಂದುಕೊಂಡಿದ್ದೇನೆ, ಕಾಂಗ್ರೆಸ್‌ನವರಿಗೆ ಹಳೆ ಚಟ ಹೋಗಿದೆ ಎಂದು. 1968ನೇ ಇಸವಿಯಲ್ಲಿ ಡೆಲ್ಲಿಯಲ್ಲಿ ನಂಬರ್ 7 ಜಂತರ್ ಮಂತರ್‌ನಲ್ಲಿ ಕಾಂಗ್ರೆಸ್ ಆಫೀಸ್ ಇತ್ತು. ಹಳೆ ದಾಖಲಿಯಲ್ಲಿದ್ದಂಥದ್ದನ್ನು ಅತಿಕ್ರಮ ಮಾಡಲಿಕ್ಕೆ ಪ್ರಯತ್ನ ಮಾಡಿದರು. ಮಾನ್ಯ ನಿಜಲಿಂಗಪ್ಪನವರು 1971ನೇ ಇಸವಿಯಲ್ಲಿ ಅವನ್ನು ಪ್ರಾರಂಭ ಮಾಡಿದ್ದು. 1972ನೇ ಇಸವಿಯಲ್ಲಿ ಕಾಂಗ್ರೆಸ್ ಆಫೀಸ್ ಬಾಗಿಲನ್ನು ಮುರಿದು ಪರಸ್ಪರ ಹೋರಾಡಿದರು. ಅದೆಲ್ಲ ಹೋಯಿತು ಆ ಕಾಲ ಮುಗಿಯಿತು. ಕಾಂಗ್ರೆಸ್ ಕ್ಲೈಮ್ ಇದ್ದರೆ ಕೋರ್ಟಿಗೆ ಹೋಗಲಿ ಈಗ ಕೋರ್ಟ್ ಜನತಾ ಪಕ್ಷಕ್ಕೆ ಹಕ್ಕು ಕೊಟ್ಟಿದೆ ಅವರ ಹಕ್ಕು ಸಾಬೀತಾಗಿದೆ ಅವರಿಗೆ ಹಕ್ಕಿದ್ದರೆ, ಕಾನೂನು ಇದೆ ದಯವಿಟ್ಟು ಕೋರ್ಟಿಗೆ ಹೋಗಲಿ.

ಶ್ರೀ ವೀರಪ್ಪ ಮೊಯ್ಲಿ.—ಈ ರೀತಿಯಾಗಿ ನಮಗೆ ಹಕ್ಕು ಇದೆ ಎಂದು ಬಲತ್ಕಾರವಾಗಿ ಪ್ರವೇಶ ಮಾಡಿದರೆ ನಾವು ಕೂಡ ಬಲತ್ಕಾರವಾಗಿ ಪ್ರವೇಶ ಮಾಡುತ್ತೇವೆ ನಿಮ್ಮ ಹಳೆ ಚಟ ಏನು ಇದೆ, ಕಾಂಗ್ರೆಸ್‌ನಲ್ಲಿ ಇದ್ದಂಥ ಹಳೆ ಚಟ **They are violating the law of the land. Then where is the question of law and order ?**

ಶ್ರೀ ರಾಮಕೃಷ್ಣ.--ಅತಿಕ್ರಮಣವನ್ನು ನಿರೋಧಿಸಬೇಕಾದರೆ ಲಾ ಅಂಡ್ ಆರ್ಡರ್ ಮೇನ್‌ಟೈನ್ ಮಾಡಬೇಕಾಗುತ್ತದೆ.

10-30 A. M.

ಶ್ರೀ ಎಂ. ವೀರಪ್ಪ ಮೊಯ್ಲಿ.-- ಹಾಗಿದ್ದರೆ ಈ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಎಲ್ಲಿದೆ ಎಂದು ಕೇಳಬೇಕಾಗುತ್ತದೆ ಲಾ ಅಂಡ್ ಆರ್ಡರ್‌ನ್ನು ಇವರ ಕೈಗೆ ತೆಗೆದುಕೊಂಡು ಅಧಿಕಾರ ಪ್ರಯೋಗ ಮಾಡುವುದು ಯಾವ ರೀತಿ ಸರಿಹೋಗುತ್ತದೆ ? ಆ ಆಸ್ತಿ ಇವರದ್ದು ಎಂದು ಹೇಳಲು ಯಾವ ಆಧಾರೆಗಳೂ ಇಲ್ಲ. ಆದರೂ ಸಹ ಆಸ್ತಿ ತಮ್ಮದೇ ಎಂದು ನಿರಂತರವಾಗಿ ಜಸ್ಟಿಫೈ ಮಾಡಿಕೊಳ್ಳುತ್ತಿದ್ದಾರೆ. ಇವರ ಈ ಚಾಳಿಯನ್ನು ಸಹಿಸಿಕೊಂಡು ಇಲ್ಲಿ ಸುಮ್ಮನೆ ಕೂರುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾತುಮಾತಿಗೂ ನನ್ನದು ಹಳೆಯ ಚಾಳಿ, ಹಳೆಯ ಚಟ ಎಂದು ಹೇಳುತ್ತಾರೆ. ಆದರೆ ಇದೆಲ್ಲಾ ನಿಮ್ಮಂತಹ ಜನರ ಜೊತೆಯಲ್ಲಿಯೇ ಹೊರಟು ಹೋಗಿದೆ. ಈಗ ನಮ್ಮಲ್ಲಿ ಅಂತಹ ಚಟ ಅಥವಾ ಚಾಳಿ ಇಲ್ಲ.